**Samyukta Karnataka, Bangalore – 28.7.11**

# ಸೈಂಟ್ ಪೌಲ್ ಇಂಗ್ಲೀಷ್ ಶಾಲೆಗೆ ಜಯ

**ಬೆಂಗಳೂರು, ಜು. 27:** ಮಕ್ಕಳಲ್ಲಿ ಜ್ಞಾನ ಹೆಚ್ಚಿಸುವ ಉದ್ದೇಶದಿಂದ ಟಿಸಿಎಸ್ ಕಂಪನಿ ಬುಧವಾರ ಬೆಂಗಳೂರಿನಲ್ಲಿ ಏರ್ಪಡಿಸಿದ್ದ 'ಟಿಸಿಎಸ್ ಐಟಿ ವಿಜ್' ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ ಸೈಂಟ್ ಪೌಲ್ ಇಂಗ್ಲೀಷ್ ಶಾಲೆಯ ಅರುಲ್ ಪ್ರಕಾಶ್ ಮತ್ತು ಪ್ರತೀಕ್ ಟ್ರೋಫಿಯೊಂದಿಗೆ ಗ್ಯಾಲಕ್ಸಿ ಟ್ಯಾಬ್ಲೆಟ್ ಮತ್ತು ಡಿಜಿಟಲ್ ಕ್ಯಾಮೆರಾಗಳನ್ನು ಗೆದ್ದುಕೊಂಡರು.

ಇವರಿಗೆ ತೀವ್ರ ಪೈಪೋಟಿ ನೀಡಿದ ಫ್ರಾಂಕ್ ಅಂಥೋಣಿ ಪಬ್ಲಿಕ್ ಶಾಲೆಯ ಜಯದೇವ್ ಸಿ.ಎಸ್. ಮತ್ತು ಪ್ರಣವ್ ಕೆ. ದ್ವಿತೀಯ ಸ್ಥಾನಕ್ಕೆ ತೃಪ್ತಿ ಪಟ್ಟುಕೊಂಡರು. ರನ್ನರ್ ಅಪ್‌ಗೆ ಟ್ರೋಫಿ ಮತ್ತು ಐಪೊಡ್ ನೀಡಲಾಯಿತು.

ಖ್ಯಾತ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಮತ್ತು ಟಿಸಿಎಸ್ ಬೆಂಗಳೂರು ಮುಖ್ಯಸ್ಥ ಹಾಗೂ ಉಪಾಧ್ಯಕ್ಷ ನಾಗರಾಜ್ ಐಜರಿ ಬಹುಮಾನ ವಿತರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ನಾಗರಾಜ್ ಐಜರಿ "ಟಿಸಿಎಸ್ ಐಟಿ ವಿಜ್, ಯುವ ಮಂದಿಯಲ್ಲಿ ತಂತ್ರಜ್ಞಾನ ಪರಿಚಯಿಸಲು ಉತ್ತಮ ವೇದಿಕೆ. ರಸಪ್ರಶ್ನೆ, ತರಗತಿಯಿಂದ ಹೊರಗಿನ ಅತ್ಯುತ್ತಮ ಬೋಧನ ವಿಧಾನ" ಎಂದು ನಾಗರಾಜ್ ಐಜರಿ ಹೇಳಿದರು.



ಬೆಂಗಳೂರಿನಲ್ಲಿ ಬುಧವಾರ ಟಿಸಿಎಸ್ ಏರ್ಪಡಿಸಿದ್ದ ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದ ಸೆಂಟ್ ಪಾಲ್ ಪ್ರೌಢಶಾಲೆಯ ವಿದ್ಯಾರ್ಥಿಗಳಾದ ಅರುಲ್ ಪ್ರಕಾಶ್ ಮತ್ತು ಪ್ರತೀಕ್ ಅವರೊಂದಿಗೆ ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ, ಟಿಸಿಎಸ್ ಬೆಂಗಳೂರು ಮುಖ್ಯಸ್ಥ ನಾಗರಾಜ್ ಇಜಾರಿ, ಕ್ವಿಜ್ ಮಾಸ್ಟರ್ ಗಿರಿ ಬಾಲಸುಬ್ರಮಣಿಯನ್.

ಅಂತಿಮ ಸುತ್ತಿಗೆ ಆಯ್ಕೆಯಾದ 6 ತಂಡಗಳಿಗೂ ಟಿಸಿಎಸ್‌ನಿಂದ ಟ್ರಾವೆಲ್ ಬ್ಯಾಗ್, ಹೆಡ್‌ಫೋನ್, ಪೋರ್ಟಬಲ್ ಸ್ಪೀಕರ್, ಯುಎಸ್‌ಬಿ ಪೆನ್‌ಡ್ರೈವ್, ಲೇಸರ್ ಪಾಯಿಂಟರ್, ದಿ ವೀಕ್ ಗಿಫ್ಟ್ ಪ್ಯಾಕ್‌ಗಳು ಬಹುಮಾನವಾಗಿ ಲಭಿಸಿತು.

ಕ್ವಿಜ್‌ನ ಪ್ರೇಕ್ಷಕರು ಬ್ಯಾಕ್‌ಪ್ಯಾಕ್ಸ್, ಪೆನ್‌ಡ್ರೈವ್, ಮಿನಿ ಪೋರ್ಟಬಲ್ ಸ್ಪೀಕರ್, ಡಿನ್ನರ್ ಕೂಪನ್ ಮತ್ತು ಟೀ ಶರ್ಟ್‌ಗಳನ್ನು ಬಹುಮಾನವಾಗಿ ಪಡೆದರು. ಡಿಸೆಂಬರ್‌ನಲ್ಲಿನ ರಾಷ್ಟ್ರೀಯ ಸುತ್ತಿನಲ್ಲಿ ಇಲ್ಲಿ ಆಯ್ಕೆಯಾದ 12 ತಂಡಗಳು ಸೆಣಸಲಿವೆ. 8 ರಿಂದ 12ನೇ ತರಗತಿವರೆಗಿನ ಮಕ್ಕಳಿಗೆ ಈ ಸ್ಪರ್ಧೆ ನಡೆಯಲಿದೆ.

ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ನಡೆದ 13ನೇ ವರ್ಷದ ಕ್ವಿಜ್‌ನಲ್ಲಿ 90 ಶಾಲೆಗಳ 1200 ಮಂದಿ ಭಾಗವಹಿಸಿದ್ದರು.